# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 84 (813)

**ಸದಸ್ಯರ ಹೆಸರು** : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 10.03.2026

**ಉತ್ತರಿಸಬೇಕಾದ ಸಚಿವರು** : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಲಬುರಗಿ ನಗರದ ಖರ್ಗೆ ಪೆಟ್ರೋಲ್ ಬಂಕ್, ರಾಮ ಮಂದಿರ ವೃತ್ತ, ಹುಮನಾಬಾದ ರಿಂಗ್ ರಸ್ತೆ ಹಾಗೂ ಆಳಂದ ಚೆಕ್ ಪೋಸ್ಟ ಈ ನಾಲ್ಕು ಕಡೆ ಮೇಲ್ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಯಾವಾಗ ಕಾಮಗಾರಿ ಪ್ರಾರಂಭಿಸಿ ಜನರಿಗೆ ಸಂಚಾರ ದಟ್ಟಣೆಯಿಂದ ಮುಕ್ತಿ ನೀಡಲಾಗುವುದು ;</td><td>
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 2020-21 ಸಾಲಿನ ಪ್ರಾದೇಶಿಕ ನಿಧಿ ಅಡಿಯಲ್ಲಿ ಹಾಗೂ 2021-22ನೇ ಸಾಲಿನ ಕಲಬುರಗಿ ಜಿಲ್ಲೆಯ ಮ್ಯಾಕ್ರೋ ಯೋಜನೆಯಡಿ ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿ ಫ್ಲೈ ಓವರ್ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.
ರೂ. ಲಕ್ಷಗಳಲ್ಲಿ
<table>
<tr><th>ಕ್ರ. ಸಂ.</th><th>ವರ್ಷ ಯೋಜನೆ ಉಪಯೋಜನೆ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th><th>ಅನುಷ್ಠಾನ ಇಲಾಖೆ</th></tr>
<tr><td>1</td><td>2020-21 Regional Fund General</td><td>ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿ ಫ್ಲೈ ಓವರ್ ನಿರ್ಮಾಣ ಕಾಮಗಾರಿ</td><td>1000.000</td><td>PWD Kalaburagi</td></tr>
<tr><td>2</td><td>2020-21 Regional Fund General</td><td>Preparation of DPR for Construction of Flyover at km 355.78 on NH 50 Near Kharge petrol bunk Kalaburagi. (DPR Charges)</td><td>52.000</td><td>PWD Kalaburagi</td></tr>
<tr><td>3</td><td>2021-22 MACRO General</td><td>ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿ ಫ್ಲೈಓವರ್ ನಿರ್ಮಾಣ.</td><td>1500.000</td><td>PWD Kalaburagi</td></tr>
<tr><td></td><td></td><td>ಒಟ್ಟು</td><td>2552.00</td><td>-</td></tr>
</table>
ಮೇಲ್ಕಂಡ ಕ್ರಮ ಸಂಖ್ಯೆ:(1)ರ ಕಾಮಗಾರಿಗೆ ದಿನಾಂಕ:27.05.2021, ಕ್ರಮ ಸಂಖ್ಯೆ:(2)ರ ಕಾಮಗಾರಿಗೆ ದಿನಾಂಕ:22.11.2021 ಮತ್ತು ಕ್ರಮ ಸಂಖ್ಯೆ:(3)ರ ಕಾಮಗಾರಿಗೆ ದಿನಾಂಕ:10.05.2022ರಂದು ಅನುಮೋದನೆ ನೀಡಲಾಗಿದ್ದು, ಎಲ್ಲಾ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಕಾರ್ಯಾದೇಶ ನೀಡಲಾಗಿರುತ್ತದೆ.
ಆದರೆ, ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ.
ಇನ್ನುಳಿದಂತೆ, ರಾಮ ಮಂದಿರ ವೃತ್ತ, ಹುಮನಾಬಾದ ರಿಂಗ್ ರಸ್ತೆ ಹಾಗೂ ಆಳಂದ ಚೆಕ್ ಪೋಸ್ಟ್ ಕಡೆ ಮೇಲ್ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
</td></tr>
<tr><td>(ಆ)</td><td>ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ನಿರಂತರ ನೀರಿನ ಸರಬರಾಜು ಕಾಮಗಾರಿ ನಡೆಯುತ್ತಿದ್ದು, ಎಲ್ ಅಂಡ್ ಟಿ ಕಂಪನಿ ಗುತ್ತಿಗೆ ಪಡೆದಿದ್ದು, ಸದರಿ ಕಾಮಗಾರಿಯು</td><td>ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಕಲಬುರಗಿ ನಗರಕ್ಕೆ ನಿರಂತರ 24x7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಮೆ||ಎಲ್&ಟಿ, ಚನ್ನೈ ರವರಿಗೆ ಸರ್ಕಾರದ ಆದೇಶ ಸಂಖ್ಯೆ UDD 96 PRJ 2020, ದಿನಾಂಕ:26/03/2020ರಲ್ಲಿ</td></tr>
</table>

<table>
<tr>
<td></td>
<td>ಬಹಳ ವರ್ಷಗಳಿಂದ ಪೂರ್ಣವಾಗದೆ ಉಳಿದಿರುಲು ಕಾರಣವೇನು ಮತ್ತು ಈ ಕಾಮಗಾರಿಗೆ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ ಎಷ್ಟು; ಬಳಕೆಯಾದ ಅನುದಾನ ಎಷ್ಟು; ಈ ಕಾಮಗಾರಿಯು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; ಇನ್ನು ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ;(ಸಂಪೂರ್ಣ ಮಾಹಿತಿ ದಾಖಲೆಯೊಂದಿಗೆ ನೀಡುವುದು)</td>
<td>ರೂ..837.43 ಕೋಟಿಗಳಿಗೆ (ಯೋಜನೆಯ ನಿರ್ಮಾಣ ಮೊತ್ತ ರೂ.604.95 ಕೋಟಿ ಮತ್ತು ಕಾರ್ಯಚರಣೆ & ನಿರ್ವಹಣೆ ಮೊತ್ತ ರೂ.232.48 ಕೋಟಿ) ಗುತ್ತಿಗೆ ನೀಡಲಾಗಿದೆ. ಕರಾರಿನ ನಿಯಮದಂತೆ ಕಾಮಗಾರಿಯನ್ನು ದಿನಾಂಕ:09/06/2025 ರೊಳಗೆ ಪೂರ್ಣಗೊಳಿಸಬೇಕಾಗಿತ್ತು.<br><br>ಗುತ್ತಿಗೆದಾರರ ಕೋರಿಕೆಯಂತೆ ಕಾಲವಿಸ್ತರಣೆಯನ್ನು ಜೂನ್ 2027 ವರೆಗೆ ನೀಡಿ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ದಂಡ ವಿಧಿಸಿ ಅನುಮೋದನೆ ನೀಡಲಾಗಿದೆ.<br><br>ಈ ಕೆಳಕಂಡ ಪ್ರಮುಖ ಕಾರಣಗಳಿಂದ ಕಾಮಗಾರಿ ಪೂರ್ಣಗೊಳ್ಳದಿರಲು ವಿಳಂಬವಾಗಿರುತ್ತದೆ:<br><br>• ಕಾಮಗಾರಿ ಪ್ರಾರಂಭದ ಅವಧಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದ 2020-21 ನೇ ಸಾಲಿನಲ್ಲಿ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿಯು ಪ್ರಾರಂಭಿಸುವಲ್ಲಿ.<br>• ಕೊಳವೆ ಮಾರ್ಗ ಅಳವಡಿಸಲು ರೈಲ್ವೇ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಇಲಾಖೆಗಳಿಂದ ಅನುಮತಿ (Right of Way for Laying of Pipelines).<br>• ನೀರಾವರಿ ಇಲಾಖೆಯವರಿಂದ ನೀರಿನ ಹಂಚಿಕೆ.<br>• ನೀರಾವರಿ ಇಲಾಖೆಯಿಂದ ಬೆಣ್ಣೆತೊರ ಜಲಾಶಯದೊಳಗೆ ಮೂಲ ಸ್ಥಾವರ ನಿರ್ಮಿಸಲು ಅನುಮತಿ ದೊರೆಯುವಲ್ಲಿ.<br>• ವಿಶ್ವ ಬ್ಯಾಂಕ್ ನಿಯಮದಂತೆ ಬೆಣ್ಣೆತೊರ ಜಲಾಶಯದಲ್ಲಿ ಮೂಲಸ್ಥಾವರ ನಿರ್ಮಿಸುವಾಗ ಜಲಚರ ಜೀವಿಗಳಿಗೆ ಹಾನಿಯಾಗದಂತೆ ಕ್ರಮ ವಹಿಸುವಲ್ಲಿ.<br>• ಗುತ್ತಿಗೆದಾರರು ಸಕಾಲದಲ್ಲಿ ಸಾಮಗ್ರಿಗಳು ಹಾಗೂ ಮಾನವ ಸಂಪನ್ಮೂಲ ಕ್ರೂಡಿಕರಿಸುವಲ್ಲಿ.<br><br><u>ಯೋಜನೆಯ ಸ್ಥಿತಿಗತಿ</u>:<br><br>ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಭೌತಿಕವಾಗಿ ಶೇ.55% ರಷ್ಟು ಹಾಗೂ ಆರ್ಥಿಕವಾಗಿ ಶೇ.40 ರಷ್ಟು ವೆಚ್ಚ ಮಾಡಲಾಗಿದೆ.<br><br>ಈ ಯೋಜನೆಯ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ರೂ.604.95 ಕೋಟಿಗೆ ಮಂಜೂರಾಗಿದ್ದು, ಇದೂವರೆಗೆ ರೂ.241.90 ಕೋಟಿ ವೆಚ್ಚವಾಗಿರುತ್ತದೆ.<br><br>ಕರಾರಿನ ನಿಯಮಾನುಸಾರ ನಿರ್ದಿಷ್ಟ ಪ್ರಗತಿ ಸಾಧಿಸದ ಕಾರಣ. ಗುತ್ತಿಗೆದಾರರ ವಿಳಂಬಕ್ಕೆ ಕರಾರಿನ ನಿಯಮಾನುಸಾರ ರೂ.60.5 ಕೋಟಿ ದಂಡವನ್ನು ವಿಧಿಸಿದೆ.</td>
</tr>
</table>

**ಕಾಮಗಾರಿಗಳ ಭೌತಿಕ ಪ್ರಗತಿಯ ವಿವರ:**

| ಕ್ರ. ಸಂ. | ಕಾಮಗಾರಿ ವಿವರ | ಗುರಿ | ಸಾಧನೆ |
|---|---|---|---|
| 1 | ಬೆಣ್ಣೆತೋರ ಜಲಾಶಯದಲ್ಲಿ ಮೂಲ ಸ್ಥಾವರ ನಿರ್ಮಾಣ | 1 | ಮಣ್ಣು ಅಗೆತದ ಮತ್ತು Jack well RCC Raft concrete ಕಾಮಗಾರಿ ಪೂರ್ಣಗೊಂಡಿರುತ್ತದೆ, ಜಾಕ್ ವೆಲ್ ನ RCC Wall Casting ಕಾಮಗಾರಿ ಪ್ರಗತಿಯಲ್ಲಿದೆ. |
| 2 | 1342 mm dia MS ಕಚ್ಚಾ ನೀರಿನ ಏರು ಕೊಳವೆ | 13.59 ಕಿ.ಮೀ | 12.83 ಕಿ.ಮೀ |
| 3 | ಜಲ ಶುದ್ಧೀಕರಣ ಘಟಕ | 58.77 MLD | 55% |
| 3 | ಶುದ್ಧ ನೀರಿನ ಕೊಳವೆ ಮಾರ್ಗ | 36.00 ಕಿ.ಮೀ | 34.69 ಕಿ.ಮೀ |
| 4 | ವಿವಿಧ ವ್ಯಾಸದ HDPE Pipe ನೀರಿನ ವಿತರಣಾ ಜಾಲ | 899.00 ಕಿ.ಮೀ | 581.66 ಕಿ.ಮೀ. |
| 5 | ಮೇಲೆತ್ತರದ ಜಲ ಸಂಗ್ರಹಗಾರಗಳು | 12 ಸಂಖ್ಯೆ | 4 ಸಂಖ್ಯೆ ಚಾಲನೆಗೊಳಿಸಲಾಗದೆ. 5 ಸಂಖ್ಯೆ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಕೊಳವೆ ಅಳವಡಿಸುವ ಆಮಗಾರಿ ಪ್ರಗತಯಲ್ಲಿದೆ. 3 ಸಂಖ್ಯೆ ಸಿವಿಲ್ ಕಾಮಗಾರಿ ಪ್ರಗತಿಯಲ್ಲಿದೆ. |
| 6 | ನೆಲಮಟ್ಟದ ಜಲಂರಹಗಾರರ | 1 ಸಂಖ್ಯೆ | ಸಿವಿಲ ಕಾಮಗಾರಿ ಪೂರ್ಣಗೊಂಡಿದೆ. |
| 7 | ಗೃಹ ಸಂಪರ್ಕ | 62767 ಸಂಖ್ಯೆ | 2725 ಸಂಖ್ಯೆ ಮನೆ ಸಂಪರ್ಕಗಳು ಪೂರ್ಣಗೊಂಡಿದ್ದು, ನಿರಂತರ ನೀರು ಸರಬರಾಜು ಚಾಲನೆಗೊಳಿಸಲಾಗಿದೆ. 2287 ಸಂಖ್ಯೆ ಮನೆ ಸಂಪರ್ಕಗಳು ಪೂರ್ಣಗೊಂಡಿದ್ದು, |

<table>
<tr>
<td></td>
<td></td>
<td>
<table>
<tr><td></td><td></td><td></td><td>ನಿಗಧಿತ ಸಮಯಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. 19359 ಸಂಖ್ಯೆ ಮನೆಗಳಿಗೆ ಕುಡಿಯುವ ನೀರಿನ ನಳ ಸಂಪರ್ಕಗಳು ನೀಡಲಾಗಿದೆ. ಹಂತ ಹಂತವಾಗಿ ಮನೆ ಸಂಪರ್ಕಗಳನ್ನು ಚಾಲನೆಗೊಳಿಸಲು ಕ್ರಮವಹಿಲಾಗುತ್ತಿದೆ. 38396 ಸಂಖ್ಯೆ ಮನೆ ಸಂಪರ್ಕಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಜೂನ್ 2027ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
</table>
ಈ ಯೋಜನೆಯನ್ನು ಜೂನ್ 2027 ರೊಳಗೆ ಪೂರ್ಣಗೊಳಿಲು ಉದ್ದೇಶಿಸಲಾಗಿದೆ.
</td>
</tr>
<tr>
<td>(ಇ)</td>
<td>ಕಲಬುರಗಿ ನಗರದಲ್ಲಿ 1992-93 ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಧರಿಯಾಪುರ ಕೋಟನೂರ ಬಡಾವಣೆ ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಆದರೆ ಸದರಿ ಬಡಾವಣೆಯಲ್ಲಿ ರಾಜೀವ್ ಗಾಂಧಿ ಪಾರ್ಕ ಅಭಿವೃದ್ಧಿ ಪಡಿಸಲು ಸುಮಾರು ವರ್ಷಗಳಿಂದ ಕಾಮಗಾರಿ ಕೈಗೆತ್ತಿಕೊಂಡಿದ್ದರೂ ಪೂರ್ಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮೂಲಭೂತ ಸೌಕರ್ಯಗಳಾದ ಚರಂಡಿ, ಶೌಚಾಲಯ, ಬೀದಿ ದೀಪಗಳು, ಮತ್ತು ರಸ್ತೆಗಳು ಅಭಿವೃದ್ಧಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td>
<td rowspan="2">ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ದರಿಯಾಪೂರ-ಕೋಟನೂರ ಬಡಾವಣೆ ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>ಸದರಿ ಬಡಾವಣೆಯಲ್ಲಿರುವ ರಾಜೀವ ಗಾಂಧಿ ಪಾರ್ಕ್ ನ್ನು 2014 ರಲ್ಲಿ ಅಭಿವೃದ್ಧಿ ಪಡಿಸಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಲಾಗಿದ್ದು, ಸದರಿ ಮಂಡಳಿಯು 2014-15, 2015-16, 2016-17, 2024-25 ಹಾಗೂ 2025-26ನೇ ಸಾಲಿನ ಕಲಬುರಗಿ ಜಿಲ್ಲೆಯ ಮ್ಯಾಕ್ರೋ ಯೋಜನೆಯಡಿ ಕಲಬುರಗಿ ನಗರದ ಧರಿಯಾಪುರ ಕೋಟನೂರ ಬಡಾವಣೆ ರಾಜೀವ್ ಗಾಂಧಿ ಥೀಮ್ ಪಾರ್ಕ್ ಅಭಿವೃದ್ಧಿ ಪಡಿಸಲು ಈ ಕೆಳಕಂಡ ಕಾಮಗಾರಿಗಳಿಗೆ ಅನುಮೋದನೆ ನೀಡಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ.<br><br>ರೂ. ಲಕ್ಷಗಳಲ್ಲಿ
<table>
<tr><th>ಕ್ರ. ಸಂ.</th><th>ವರ್ಷ ಯೋಜನೆ ಉಪಯೋಜನೆ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th><th>ಅನುಷ್ಠಾನ ಇಲಾಖೆ</th><th>ಕಾಮಗಾರಿ ಹಂತ</th></tr>
<tr><td>1</td><td>2014-15 MACRO General</td><td>Construction of Insectorium at Rajiv Gandhi theme park, Kalaburagi</td><td>47.03</td><td>NK</td><td>Completed</td></tr>
<tr><td>2</td><td>2014-15 MACRO General</td><td>Construction of Aquarium block at Rajiv</td><td>39.38</td><td>NK</td><td>Completed</td></tr>
</table>
</td>
</tr>
<tr>
<td>(ಈ)</td>
<td>ಸದರಿ ಪಾರ್ಕ್ ಅಭಿವೃದ್ಧಿ ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; ಮತ್ತು ಸದರಿ ಪಾರ್ಕ್ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಲಾದ ಅನುದಾನ ನಿಷ್ಪ್ರಯೋಜಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ, ಸರ್ಕಾರ ಕೈಗೊಂಡ ಕ್ರಮಗಳೇನು ;</td>
</tr>
</table>

| | | | | | | |
|---|---|---|---|---|---|---|
| | | | Gandhi theme park, Kalaburagi | | | |
| | | 3 | 2014-15 MACRO General | Construction of Kids house at Rajiv Gandhi theme park, Kalaburagi | 49.86 | NK | Completed |
| | | 4 | 2014-15 MACRO General | Construction of Fun complex & 7D theater at Rajiv Gandhi theme park, Kalaburagi | 162.1 | NK | Completed |
| | | 5 | 2014-15 MACRO General | Water Related Works: Drilling of borewell @ Rajiv Gandhi theme park | 5.12 | NK | Completed |
| | | 6 | 2014-15 MACRO General | Constn of 30mtr high mast light at Rajiv Gandhi theme park | 28 | NK | Completed |
| | | 7 | 2015-16 MACRO General | Construction of Fountain in Makrana marbal 3 no. @ Rajiv Gandhi Theme Park Kalaburagi | 28.02 | NK | Completed |
| | | 8 | 2015-16 MACRO General | Construction of Fountain in Makrana marbal bodhi design @ Rajiv Gandhi Theme Park Kalaburagi | 10.33 | NK | Completed |
| | | 9 | 2015-16 MACRO General | Construction of footpath outside compound wall @ Rajiv Gandhi Theme park, Kalaburagi | 38.46 | NK | Completed |
| | | 10 | 2015-16 MACRO General | Providing & fixing of street light at Rajiv gandi theme park kalaburagi | 47.78 | NK | Completed |
| | | 11 | 2016-17 MACRO General | Providing and constn of bird enclosure in the premises of Rajiv Gandhi park at Dhariyapur dist: Kalaburagi | 14.36 | KRIDL-2 | Completed |
| | | 12 | 2016-17 MACRO General | Construction of CC Road from | 31.5 | CMC | Completed |

| | | | | | |
|---|---|---|---|---|---|
| | | Dabarabad Cross to Rajiv Gandhi Ashraya Yojane Colony @ Jafarabad in Ward No. 22 in Kalaburagi City | | | |
| 13 | 2016-17 MACRO General | Providing, Supplying and Installation of ISO Resin Coated Fiber Models (Outdoor) at Rajiv Gandhi Theme Park in Kalaburagi. | 42.73 | NK | Completed |
| 14 | 2024-25 MACRO General | Development of Rajeev Gandhi Theme Park at Dariyapur in Kalaburagi City | 100.000 | CMC | Not Started |
| 15 | 2025-26 MACRO General | Development of Rajeev Gandhi Theme Park at Dariyapur in Kalaburagi City | 200.000 | CMC | Not Started |
| | | **Total** | **844.67** | | |

ಕ್ರಮ ಸಂಖ್ಯೆ:(14) ಮತ್ತು (15)ರ ಕಾಮಗಾರಿಯ ಕ್ರಿಯಾ ಯೋಜನೆಗೆ ದಿನಾಂಕ:30.12.2024ರಂದು ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಹಂತದಲ್ಲಿರುತ್ತದೆ.

**ನಅಇ 21 ಎಸಿಜಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.